ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಸಿ1(1)/ಆಡಳಿತ/ಪ್ರಾಶಾಶಿ/ವರ್ಗಾವಣೆ/52/2020-21 ದಿನಾಂಕ:23-10-2021

ಇವರಿಗೆ,
ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು
ಅಫಜಲಪೂರ, ಆಳಂದ, ಚಿಂಚೋಳಿ, ಚಿತ್ತಾಪೂರ
ಜೇವರ್ಗಿ, ಕಲಬುರಗಿ(ಉ.ವ) ಕಲಬುರಗಿ(ದ.ವ), ಸೇಡಂ

ವಿಷಯ:- ಕಡ್ಡಾಯ/ಹೆಚ್ಚುವರಿ ಶಿಕ್ಷಕರ ಅಂತಿಮ ಕೌನ್ಸಲಿಂಗ್ ಅರ್ಹತಾ/ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:- 1) ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಪ್ರಾ.ಪ್ರೌ.ಶಿ ವರ್ಗ ಕೋಶ 19-20 ಕ.ವಿಶೇಷ ಕೌ ಅ/01/2021-22 ದಿ:29/06/2021

2) ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಪ್ರಾ.ಪ್ರೌ.ಶಿ ವರ್ಗ ಕೋಶ 19-20 ಕ.ವಿಶೇಷ ಕೌ ಅ/01/2021-22 ದಿನಾಂಕ:21/10/2021

&&&&&

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ-01ರ ವೇಳಾಪಟ್ಟಿಯಂತೆ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಗಿತ್ತು. ಅದರ ವೇಳಾ ಪಟ್ಟಿಯಂತೆ ವರ್ಗಾವಣೆ ಆಧೀಸೂಚನೆ ಈ ಹಿಂದೆ ಪ್ರಕಟಿಸಲಾದ ಹೆಚ್ಚುವರಿ /ಕಡ್ಡಾಯ ಶಿಕ್ಷಕರು ಅರ್ಜಿಗಳನ್ನು ಸಲ್ಲಿಸಲಾಗಿದ್ದು ಸದರಿ ಅರ್ಜಿಗಳ ಪರಿಶೀಲನೆ ಪುರಸ್ಕಾರ/ತೀರಸ್ಕಾರ ಕ್ರಮ ಕೈಗೊಳ್ಳಲಾಗಿದ್ದು. ಇರುತ್ತದೆ. ಅದರಂತೆ ಕಡ್ಡಾಯ/ಹೆಚ್ಚುವರಿ ಶಿಕ್ಷಕರ ಅಂತಿಮ ಕೌನ್ಸಲಿಂಗ್ ಅರ್ಹತಾ/ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಸದರಿ ಪಟ್ಟಿಯನ್ನು ತಮ್ಮ ಸೂಚನಾ ಫಲಕದಲ್ಲಿ ಪ್ರಕಟಿಸಲು ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ. ಹಾಗೂ ಶಿಕ್ಷಕರು ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಅರ್ಜಿ ಅಥವಾ ಸೇವಾ ಪ್ರಮಾಣ ಪತ್ರ ತರಲು ಸೂಚಿಸಿದೆ.

ಪ್ರಕಟಿಸಲಾದ ಪಟ್ಟಿಗೆ ಕೌನ್ಸಲಿಂಗ್ ನಡೆಸುವ ಹಿನ್ನೆಲೆಯಲ್ಲಿ ಖಾಲಿ ಹುದ್ದೆಗಳನ್ನು ಕೂಡಾ ದಿನಾಂಕ:25-10-2021ರಂದು ಪ್ರಕಟಿಸಲಾಗುವುದು. ಮತ್ತು ವೇಳಾ ಪಟ್ಟಿಯಂತೆ 2019-20ನೇ ಸಾಲಿನ ಸಾಮಾನ್ಯ ವರ್ಗಾವಣೆಗಳಲ್ಲಿನ ಕಡ್ಡಾಯ ವರ್ಗಾವಣೇ ಮೇಲೆ ಅಥವಾ ಸಮರ್ಪಕ ಮರುಹಂಚಿಕೆ ಮೇರೆಗೆ ಪ್ರಾಥಮಿಕ ಶಾಲಾ ಶಿಕ್ಷಕನ ಸಂದರ್ಭದಲ್ಲಿ ತಾಲೂಕಿನ ಹೊರಗೆ ವರ್ಗಾವಣೆಗೊಂಡ ಶಿಕ್ಷಕನ ಸಂಬಂಧದಲ್ಲಿ ವರ್ಗಾವಣಾ ಪೂರ್ವದಲ್ಲಿ ಎಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಆ ಸಂಬಂಧಪಟ್ಟ ತಾಲೂಕಿನೊಳಗೆ ಸ್ಥಳ ನಿಯುಕ್ತಿ ಪ್ರಯೋಜನವನ್ನು ನೀಡುವುದಕ್ಕೆ ಖಾಲಿ ಹುದ್ದೆ ಲಭ್ಯತೆಗೆ ಒಳಪಟ್ಟು ಸ್ಥಳ ಆಯ್ಕೆ ಮಾಡಿಕೊಳ್ಳಲು ಒಂದು ಸಲದ ಕ್ರಮವಾಗಿ ವಿಶೇಷ ಕೌನ್ಸಲಿಂಗ್ ದಿನಾಂಕ:26-10-2021ರಂದು ನಡೆಯಲಿದ್ದು. ಪ್ರಯುಕ್ತ ಪಟ್ಟಿಯಲ್ಲಿರುವ ಎಲ್ಲಾ ವೃಂದದ (ಕಡ್ಡಾಯ/ಹೆಚ್ಚುವರಿ) ಶಿಕ್ಷಕರನ್ನು **ಪ್ರಾತ್ಯಕ್ಷಿಕ ಪ್ರೌಢ ಶಾಲೆ (ಆರ್.ಎಮ್.ಎಸ್.ಎ ವಿಭಾಗ) ಕಲಬುರಗಿ** ಇಲ್ಲಿ ನಡೆಯಲಿರುವ ಕೌನ್ಸಲಿಂಗಗೆ ತಪ್ಪದೇ ಹಾಜರಗುವಂತೆ ಸೂಚಿಸಿದೆ. ಇದನ್ನು ವ್ಯಾಪಕವಾಗಿ ಪ್ರಚೂರ ಪಡಿಸಲು ಸೂಚಿಸಿದೆ.

ಕೌನ್ಸಲಿಂಗ್ ದಿನಾಂಕಕ್ಕೆ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾಗಳು ಹಾಗೂ ವರ್ಗಾವಣೆ ಕಾರ್ಯನಿರ್ವಾಹಕರು (ಪ್ರಾಥಮಿಕ) ಇವರು ಕಡ್ಡಾಯವಾಗಿ ಹಾಜರಿರತಕ್ಕದ್ದು.

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ

ಇಲಾಖಾ ವೇಬ್ ಸೈಟನಲ್ಲಿ ಪ್ರಕಟಿಸಲು ಸೂಚಿಸಿದೆ.

Scanned with CamScanner